**ದಿನಾಂಕ: 18-10-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು: ವಾದಿಗಳ ಪರ ಶ್ರೀ ವೈ.ಹೆಚ್.ಕೆ. ವಕೀಲರಿಂದ:**

ನಾನು ಕೋಡಿಯಾಲ ಹೊಸಪೇಟೆ ಗ್ರಾಮದಲ್ಲಿ ವಾಸವಾಗಿದ್ದೇನೆ. ನನ್ನ ಮನೆ ನಂಬರು ನೆನಪಿಲ್ಲ. ನಾನು ಹುಟ್ಟಿನಿಂದಲೂ ಅಲ್ಲಿಯೇ ಇದ್ದೇನೆ. 10 ನೇ ಪ್ರತಿವಾದಿಯ ಆಸ್ತಿಯ ನಂಬರು ಏನು ಎಂದರೆ 712 ಮುಂದಿನ ನಂಬರು ಗೊತ್ತಿಲ್ಲ. ಅದೇ ರೀತಿ 11 ನೇ ಪ್ರತಿವಾದಿಯ ಆಸ್ತಿಯ ನಂಬರು ಏನು ಎಂದರೆ 55 ಇರಬಹುದು. 10 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಯಾರಿಂದ ಖರೀದಿ ಮಾಡಿದ್ದಾರೆ ಎಂದರೆ ಖಲೀಲ್ ಅವರಿಂದ 2017 ರಲ್ಲಿ ಖರೀದಿ ಮಾಡಿದ್ದಾರೆ. ಅದಲು ಬದಲು ಪತ್ರ ಯಾವಾಗ ಆಗಿದೆ ಎಂದರೆ 2017 ರಲ್ಲಿ ಆಗಿದೆ. ನಿ ಡಿ -26 ಅದಲು ಬದಲು ಪತ್ರಕ್ಕೆ ಯಾರು ಯಾರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ನಾನು, ಗಣೇಶ ಮತ್ತು ಬಸವರಾಜ ರವರು ಸಹಿ ಮಾಡಿರುತ್ತೇವೆ. ನಾನು ಏನಾಗಿ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿದಾರರಾಗಿ ನಿಡಿ -26 ಕ್ಕೆ ಸಹಿ ಮಾಡಿರುತ್ತೇನೆ. ಅದಲು ಬದಲು ಪತ್ರ ಮಾಡಿಕೊಡುವ ಬಗ್ಗೆ ಯಾವ ದಿನಾಂಕ , ಯಾವ ಜಾಗದಲ್ಲಿ ಮಾತುಕತೆಯಾಯಿತು ಎಂದರೆ ನನಗೆ ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಅದಲು ಬದಲು ಪತ್ರ ಮಾಡಿಕೊಂಡರು ಎಂದರೆ ಅವರ ಅನುಕೂಲಕ್ಕೆ ತಕ್ಕ ಹಾಗೆ ಮಾಡಿಕೊಂಡಿರುತ್ತಾರೆ.

2. ವಾದಿಗೆ ದಾವಾ ಆಸ್ತಿಗಳಲ್ಲಿ ಹಿಸ್ಸೆಯ ಹಕ್ಕನ್ನು ತಪ್ಪಿಸುವ ಉದ್ದೇಶದಿಂದ ಸುಳ್ಳು ಅದಲು ಬದಲು ಪತ್ರ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಯಾರು ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿಯನ್ನು ನೋಡಿರುತ್ತೇನೆ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಯಿತು. ಅದನ್ನು ನೋಡಿ ಅದರಲ್ಲಿರುವ ದಾವಾ ಆಸ್ತಿಯ ಮನೆಗಳು ಎಂದು ನೋಡಿ ಗುರುತಿಸಿರುತ್ತಾರೆ. ನಿ ಪಿ -37(ಎ) ಪೋಟೋವನ್ನು ತೋರಿಸಿ ಖಲೀಲ್ ಅವರ ಅಕ್ಕ ಎಂದರೆ ನನಗೆ ಗೊತ್ತಿಲ್ಲ. ನಾನು 11 ನೇ ಪ್ರತಿವಾದಿ ವಾಸವಾಗಿರುವ ಮನೆಗೆ ಯಾವಾಗ ಹೋಗಿ ನೋಡಿದ್ದೀರಾ ಎಂದರೆ ಇಲ್ಲ. ನಾನು ಹಾಕಿರುವ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ವೈಯಕ್ತಿಕವಾಗಿ ಮಾಹಿತಿ ಇಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ಯಾರು ಮಾಹಿತಿ ಕೊಟ್ಟಿದ್ದಾರೆ ಎಂದರೆ ನಾನೇ ಕೊಟ್ಟಿರುತ್ತೇನೆ. ನಾನು ಮತ್ತು 11 ನೇ ಪ್ರತಿವಾದಿ ಸೇರಿಕೊಂಡು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸುಳ್ಳು

ವಿಚಾರಗಳನ್ನು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಕೊಡಿಯಾಲ ಗ್ರಾಮ ಪಂಚಾಯಿತಿ ಆಸ್ತಿ ನಂ.702/12 ಅ ಆಸ್ತಿಯಲ್ಲಿ ವಾದಿ ಯಾವತ್ತು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಬಿ.ಸಿದ್ದರಾಜು)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.